ಎಂದು change ಮಾಡಿದ್ದಾರೆ. ಅದು ಎಲ್ಲೋ ಒಂದು ಕಡೆ ಲೋಪ ಎಂಬುದು ನನ್ನ ಆರೋಪವಾಗಿದೆ.

ಶ್ರೀ ಸಿದ್ದರಾಮಯ್ಯ: ಅವರು ಹೇಳುವುದು ನಿಜ. Special Development Plan ಎಂದು ಹೆಸರು change ಮಾಡಿದ್ದಾರೆ. ಈ ಸರ್ಕಾರ ನಂಜುಂಡಪ್ಪನವರ ವರದಿ ತರಿಸಿಕೊಂಡು Regional imbalance ಅನ್ನು ಸರಿಪಡಿಸಬೇಕು, ರಾಜ್ಯ ಸಮಾನವಾಗಿ ಬೆಳೆಯಬೇಕು, inclusive growth ಇರಬೇಕು, the very thrust in this 11th Five Year Plan is inclusive growth. 11ನೇ ಪಂಚವಾರ್ಷಿಕ ಯೋಜನೆಯಲ್ಲಿ inclusive growth ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. We are in the last year of the 11th Five Year Plan. This is 4th current year 2011–12ಕ್ಕೆ last year of the 11th Five Year Plan. Where is the inclusive growth here? No inclusive grow. ಬಡವರಿಗೆ ಮನೆಗಳನ್ನು ಕಟ್ಟಿಕೊಡಲಿಲ್ಲ. ಇವರು Special Budget ಮಂಡಿಸಿದರು. ನಮ್ಮಲ್ಲಿರುವ ಅಂಕಿ ಅಂಶಗಳ ಪ್ರಕಾರ the agricultural labourer about 30% of the agriculture labour, they are getting only Rs. 12/- per day. ಅದರ ಬಗ್ಗೆ ಇಲ್ಲಿ ಏನೂ ಕಾರ್ಯಕ್ರಮ ಇಲ್ಲ. ಒಂದು ತಿಂಗಳಿಗೆ 360 ರೂ. ಕೂಲಿ ಇದೆ, ಅದೂ ಕೂಡ 30 ದಿವಸ ಕೆಲಸ ಸಿಕ್ಕಿದರೆ ಮಾತ್ರ. ಆ ಕಾರಣಕ್ಕೋಸ್ಕರವೇ ಕೇಂದ್ರ ಸರ್ಕಾರದವರು ಮಹಾತ್ಮಗಾಂಧೀಜಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಎಂದು ಜಾರಿಗೆ ತಂದಿದ್ದಾರೆ. ಆ ಬಗ್ಗೆ ಕಾನೂನನ್ನೂ ಜಾರಿಗೆ ತಂದರು. Parliamentನಲ್ಲಿ Act ಅನ್ನು ಮಾಡಿದ್ದಾರೆ. ಇವರಿಗಂತು ಬಡವರ ಬಗ್ಗೆ ಕಾಳಜಿ ಇಲ್ಲ. NREGSನಲ್ಲಿ ಕೇಂದ್ರ ಸರ್ಕಾರ ಕೊಡುವ ಹಣವನ್ನಾದರೂ ಖರ್ಚು ಮಾಡಬೇಕಲ್ಲವೇ?

ಅಧ್ಯಕ್ಷರು: ತಾವು ತಮ್ಮ ಭಾಷಣವನ್ನು ಗುರುವಾರ ಮುಂದುವರಿಸುತ್ತೀರಾ?

ಶ್ರೀ ಸಿದ್ದರಾಮಯ್ಯ: ಆಯಿತು.

5. ಗಮನ ಸೆಳೆಯುವ ಸೂಚನೆಗಳು

ಅ. ವಿಷಯ: ಹಿಂದುಳಿದ ಬುಡಕಟ್ಟು, ಅಲೆಮಾರಿ, ಅರೆ ಅಲೆಮಾರಿ ಲಕ್ಷಣವುಳ್ಳ ಹಾಗೂ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ಕಾಡುಗೊಲ್ಲರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಅವರಿಗೂ ಪ್ರತ್ಯೇಕವಾದ ಮೀಸಲಾತಿಯ ಜೊತೆಗೆ ಸರ್ಕಾರಿ ಸೌಲಭ್ಯವನ್ನು ಒದಗಿಸುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಹಿಂದುಳಿದ ಬುಡಕಟ್ಟು, ಅಲೆಮಾರಿ, ಅರೆ ಅಲೆಮಾರಿ ಲಕ್ಷಣವುಳ್ಳ ಹಾಗೂ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ಕಾಡುಗೊಲ್ಲರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಅವರಿಗೂ ಪ್ರತ್ಯೇಕವಾದ ಮೀಸಲಾತಿಯ ಜೊತೆಗೆ ಸರ್ಕಾರಿ ಸೌಲಭ್ಯವನ್ನು ಒದಗಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು): ಮಾನ್ಯ ಅಧ್ಯಕ್ಷರೆ, ಈಗ ಜಾರಿಯಲ್ಲಿರುವ ಸರ್ಕಾರಿ ಆದೇಶ ಸಂ: ಸಕಇ 225 ಬಿಸಿಎ 2000 ದಿ: 30.3.2002ರಂತೆ ಗೊಲ್ಲ ಮತ್ತು ಈ ಜನಾಂಗದ ಉಪಜಾತಿ, ಅಡವಿಗೊಲ್ಲ ಇತ್ಯಾದಿಗಳು ಹಿಂದುಳಿದ ವರ್ಗಗಳ ಪ್ರವರ್ಗ-1ರಲ್ಲಿ ಸೇರಿರುತ್ತವೆ.

ಈ ಸಮಾಜದ ಮುಖಂಡರ ಸಭೆಯನ್ನು ದಿನಾಂಕ: 14.02.2011 ರಂದು ಡಿ. ದೇವರಾಜ ಅರಸು ಭವನದ ಸಭಾಂಗಣದಲ್ಲಿ ಸಭೆ ಕರೆದು ಇವರ ಜೊತೆ ಪೂರ್ಣ ಪ್ರಮಾಣದ ಚರ್ಚೆ ಮಾಡಲಾಗಿದೆ. ಸದರಿ ಸಭೆಯಲ್ಲಿ ಈ ಮುಖಂಡರು ಹಲವು ಬೇಡಿಕೆಗಳನ್ನು ಮಂಡಿಸಿರುತ್ತಾರೆ. ಅವುಗಳಲ್ಲಿ ಮುಖ್ಯವಾದವು ಇವರು ವಾಸಿಸುವ ಬೇಚರಕ್ ಗ್ರಾಮಗಳ ಮತ್ತು ದಾಖಲೆ ಇಲ್ಲದೆ ನಿರ್ಮಿಸಿಕೊಂಡಿರುವ ಹಟ್ಟಿಗಳನ್ನು ಸಕ್ರಮಗೊಳಿಸಬೇಕೆಂದು, ಈಗ ಅವರು ವಾಸಿಸುತ್ತಿರುವ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿಗಣಿಸಬೇಕೆಂದು ಈ ಸಮಾಜದ ವಿದ್ಯಾರ್ಥಿಗಳಿಗೆ ಶೇ.100ರಷ್ಟು ಪ್ರವೇಶಾವಕಾಶವನ್ನು ವಿದ್ಯಾರ್ಥಿ ನಿಲಯಗಳಲ್ಲಿ ಕಲ್ಪಿಸಬೇಕೆಂದು ಹೆಚ್ಚು ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ವಿಶೇಷ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಬೇಕೆಂದು ಸಮುದಾಯ ಭವನಗಳನ್ನು ನಿರ್ಮಿಸಬೇಕೆಂದು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ನೀಡಲಾಗುವ ಯೋಜನೆಗಳಲ್ಲಿ ಇವರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಸಮಾಜಕ್ಕೆ ಹೆಚ್ಚು ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ವಿಶೇಷ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲು ಬೇಡಿಕೆ ಇಟ್ಟಿದ್ದು, ಈ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಕರ್ನಾಟಕ ರಾಜ್ಯದ ಕಾಡುಗೊಲ್ಲರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ಬಗ್ಗೆ ಆ ಜನಾಂಗದ ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳಲು ಸರ್ಕಾರವು ದಿನಾಂಕ: 8.9.2010ರಂದು ಆದೇಶ ನೀಡಿರುತ್ತದೆ. ಈ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳಲು ದಿನಾಂಕ: 19.2.2011ರಂದು ಮೈಸೂರು

ವಿಶ್ವವಿದ್ಯಾನಿಲಯಕ್ಕೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. ಅಧ್ಯಯನ ವರದಿ ಬಂದ ನಂತರ ಪರಿಶಿಷ್ಟ ವರ್ಗಕ್ಕೆ ಸೇರಿಸುವ ಬಗ್ಗೆ ಪರಿಶೀಲಿಸಿ, ಕ್ರಮ ವಹಿಸಲಾಗುವುದು.

ಕಾಡುಗೊಲ್ಲರ ಜನಾಂಗದ ಸಮಗ್ರ ಅಭಿವೃದ್ಧಿ ಬಗ್ಗೆ ಹಿಂದುಳಿದ ವರ್ಗಗಳ ಆಯೋಗ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಅದರಲ್ಲಿ ಸೂಚಿಸಿರುವ ಅಂಶಗಳನ್ನು ಪರಿಶೀಲಿಸಿ, ಇವರ ಸಮಗ್ರ ಅಭಿವೃದ್ಧಿಗೆ ಪರಿಶೀಲಿಸಿ, ಸೂಕ್ತ ನಿರ್ಧಾರ ಸರ್ಕಾರವು ತೆಗೆದುಕೊಳ್ಳಲಾಗುವುದು.

2010–11ನೇ ಸಾಲಿನಲ್ಲಿ ವಿಶೇಷವಾಗಿ ಗೊಲ್ಲರ ಹಟ್ಟಿಗಳ ಅಭಿವೃದ್ಧಿಗಾಗಿ ರೂ. 2.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. 2011–12ನೇ ಸಾಲಿಗೆ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ ಸಮಗ್ರ ಅಭಿವೃದ್ಧಿಗಾಗಿ ರೂ. 5.00 ಕೋಟಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ಅವರು ಏನು ಮನವಿ ಮಾಡಿದ್ದರು ಆ ಮನವಿಗೆ ಸ್ಪಂದಿಸುತ್ತೇವೆ ಎನ್ನುವುದು ಮತ್ತು ಇನ್ನೊಂದು ಸಕಾರಾತ್ಮಕವಾಗಿ ತಾವು ಕುಲಶಾಸ್ತ್ರ ಅಧ್ಯಯನ ಕೈಗೊಳ್ಳಲು ಆದೇಶವನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಮೂಲಭೂತವಾದ ಒಂದು ಪ್ರಶ್ನೆಯನ್ನು ಕೇಳಲಿಕ್ಕೆ ಬಯಸುತ್ತೇನೆ. ಸರ್ವೋಚ್ಚ ನ್ಯಾಯಾಲಯ ಈಗಾಗಲೇ ತೀರ್ಮಾನವನ್ನು ಕೊಟ್ಟು Backward Class Commission permanent ಆಗಿ ಮಾಡಿರುವ ಹಿನ್ನೆಲೆಯಲ್ಲಿ ಆ ಆಯೋಗದಲ್ಲಿ ಯಾವುದೇ ಜಾತಿ, ವರ್ಗವನ್ನು ಸೇರಿಸಬೇಕಾದಾಗ Backward classನ ಶಿಫಾರಸ್ಸಿನ ಆಧಾರದ ಮೇಲೆ ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕಾಗುತ್ತದೆ. ಇಲ್ಲಿ ಮೂಲಭೂತವಾದ ಪ್ರಶ್ನೆ ಏನೆಂದರೆ, ನೀವು ಕುಲಶಾಸ್ತ್ರ ಅಧ್ಯಯನ ಮಾಡಿಸಬಹುದು. ಮಾಡಿಸಿದ ನಂತರ ಅದಕ್ಕೆ Backward Class Commission ರೀತಿಯಲ್ಲಿ ನಿಮ್ಮಲ್ಲಿರುವ SC/ST Commissionನವರು ಕೂಡ ಅದನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗುತ್ತದೆ. ಕೇವಲ ಒಂದು Universityಯಿಂದ ಕೊಡುವ ಕುಲಶಾಸ್ತ್ರದ ಅಧ್ಯಯನದ ಮೇಲೆ ನೀವು ಏನೂ ಮಾಡುವುದಕ್ಕೆ ಬರುವುದಿಲ್ಲ. ಅದು ಮತ್ತೆ ವಾಪಸ್ಸು ಬರುತ್ತದೆ. Article 342ರ ಪ್ರಕಾರ ನೀವು ಯಾವುದನ್ನೇ ಸೇರಿಸಬೇಕಾದರೂ ಕೂಡ ಅದು ಕೇಂದ್ರ ಸರ್ಕಾರಕ್ಕೆ ಹೋಗಬೇಕಾಗುತ್ತದೆ. ಇಲ್ಲಿ ಬೇಡಿಕೆ ಇರುವುದೇನೆಂದರೆ, ಕಾಡು ಗೊಲ್ಲರು ಎನ್ನುವವರು ಕಾಡಿನಲ್ಲಿ ವಾಸ

4.10 ಪಿ.ಎಂ.

ಮಾಡುತ್ತಿರತಕ್ಕಂಥದ್ದು. ಅವರು ಅವರ ರೀತಿನೀತಿಗಳನ್ನು ಇವತ್ತಿಗೂ ಕೂಡ ಪಾಲಿಸಿಕೊಂಡು ಬರುತ್ತಿದ್ದಾರೆ. ಇವತ್ತು ಕರ್ನಾಟಕದಲ್ಲಿ Tribal characterstic ಎಂದು ಏನಾದರೂ ಇದ್ದರೆ ಅದು ಕೇವಲ ಕಾಡು ಗೊಲ್ಲರಿಗೆ ಮಾತ್ರ ಇರುವಂಥದ್ದು. ಅವರು ಕೇವಲ 8 ಜಿಲ್ಲೆಗಳಲ್ಲಿ ಮಾತ್ರ ಇದ್ದಾರೆ. ಅವರು ಎಲ್ಲಾ ಕಡೆಯೂ ಇಲ್ಲ. ಆದರೆ ಅವರಿಗೆ ನಾನು ಕೇಳಿರುವ ವಿಚಾರವೇನೆಂದರೆ, ಅವರಿಗೆ ಪ್ರತ್ಯೇಕ ಮೀಸಲಾತಿ ಕೊಡುವುದು ಒಂದು ವಿಚಾರ, ಸರ್ಕಾರಿ ಸೌಲಭ್ಯಗಳನ್ನೂ ಒದಗಿಸಿಕೊಡಬೆಕು. ನಾನು ಏಕೆ ಈ ಪ್ರಶ್ನೆ ಪ್ರಸ್ತಾಪಿಸುತ್ತಿದ್ದೇನೆಂದರೆ, ಅವರಿಗೆ ಪ್ರತ್ಯೇಕವಾದ ಮೀಸಲಾತಿಯನ್ನು ಕೊಡುವುದರ ಬಗ್ಗೆ ನೀವು ಶಾಸ್ತ್ರೋಕ್ತವಾಗಿ ಅಧ್ಯಯನ ಮಾಡುವುದರ ಜೊತೆಗೆ ನೀವು SC/ST Commissionಗೆ ಅಧಿಕಾರವನ್ನು ಕೊಡಬೇಕಾಗುತ್ತದೆ. ಅಧಿಕಾರವನ್ನು ಕೊಡದೇ ಕೇಂದ್ರ ಸರ್ಕಾರಕ್ಕೆ ನೀವು ಕಳುಹಿಸಿದರೆ ಅದಕ್ಕೆ ಅರ್ಥ ಬರುವುದಿಲ್ಲ. ಅದು ಒಪ್ಪಿಗೆಯಾಗುವುದಿಲ್ಲ. ದಯಮಾಡಿ, ತಾವು ಇದನ್ನು ಮೂಲತಃ ಅರ್ಥ ಮಾಡಿಕೊಳ್ಳಿ. ಕೂಡಲೇ ಸರ್ಕಾರದವರು SC/ST Commsssionಗೆ ಯಾವುದೇ ಒಂದು ಜಾತಿಯನ್ನು tribal ಅನ್ನು ಅದು ಅಲೆಮಾರಿ, ಅರೆ ಅಲೆಮಾರಿ ಜಾತಿಯನ್ನು ಸೇರಿಸಬೇಕಾದಂಥ ಸಂದರ್ಭದಲ್ಲಿ ಅದು through Commission ಹೋಗಬೇಕಾಗುತ್ತದೆ ಎಂಬುದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಬಹಳ ಮುಖ್ಯವಾಗಿ, ಅವರಿಗೆ ನೀವು ಸರ್ಕಾರದಿಂದ ಸವಲತ್ತು ಕೊಡಬೇಕು ಎಂದು ಹೇಳುತ್ತೀರಿ. ನಾನು ಬಹಳ ವರ್ಷಗಳಿಂದ ವಿಧಾನ ಸಭೆಯಲ್ಲಿದ್ದೇನೆ. ಪ್ರತಿವರ್ಷವೂ ಕೂಡ ಕಾಡುಗೊಲ್ಲರ ಬಗ್ಗೆ ಯಾವುದೇ ಪ್ರಶ್ನೆ ಬಂದ ಸಂದರ್ಭದಲ್ಲಿ ಹೌದು, ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುತ್ತೇವೆ ಎನ್ನುವ ಸರ್ವೆ ಸಾಮಾನ್ಯವಾದಂಥ ಆಶ್ವಾಸನೆಯನ್ನು ಕೊಡುತ್ತಾರೆ. ಆದರೆ, ನನ್ನ ಜಿಲ್ಲೆಯಲ್ಲಿ ಸುಮಾರು ನೂರಾರು ಗೊಲ್ಲರಹಟ್ಟಿಗಳಿವೆ. ಅವು ಯಾವುವೂ ಇದುವರೆಗೂ ಕಂದಾಯ ಗ್ರಾಮಗಳಾಗಲಿಲ್ಲ.ಆಶ್ವಾಸನೆಗಳೆಲ್ಲ ಕೇವಲ ಪೊಳ್ಳಾಗುತ್ತಿವೆಯೇ ವಿನಃ ಯಾವುದೂ ಕೂಡ ಅನುಷ್ಠಾನವಾಗುತ್ತಿಲ್ಲ. ಇದು ವಾಸ್ತವಿಕ ಅಂಶ. ನಾನು ನಿಮ್ಮೊಬ್ಬರನ್ನೇ ಟೀಕೆ ಮಾಡುತ್ತಿಲ್ಲ. ಹಿಂದಿನ ಎಲ್ಲ ಸರ್ಕಾರಗಳ ಅವಧಿಯಲ್ಲೂ ಸಹ ಇದು ಆಗಿರುವುದು ಎನ್ನುವುದನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ದಯಮಾಡಿ, ಇದರ ಬಗ್ಗೆ ನಿರ್ದಿಷ್ಟವಾಗಿರುವ ಒಂದು ಕಾರ್ಯಕ್ರಮವನ್ನು

ರೂಪಿಸಬೇಕು. ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗ. ನಾನು ಏಕೆ ಈ ಪ್ರಶ್ನೆ ಪ್ರಸ್ತಾಪಿಸುತ್ತಿದ್ದೇನೆಂದರೆ, ನಾನು ಮೊನ್ನೆ ದೆಹಲಿಗೆ ಹೋಗಿ ಅಲ್ಲಿನ ಕೆಲವು ಅಧಿಕಾರಿಗಳ ಜೊತೆ ಮಾತನಾಡಿದಾಗ, ಅಲೆಮಾರಿ, ಅರೆ ಅಲೆಮಾರಿ ಜನಾಂಗಕ್ಕೆ ಮಹಾರಾಷ್ಟ್ರಕ್ಕೆ ಒಂದು ವರ್ಷಕ್ಕೆ ಕೇಂದ್ರದಿಂದ 500–600 ಕೋಟಿ ರೂಪಾಯಿ ಹೋಗುತ್ತಿದೆ. ನಮ್ಮ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬರುತ್ತಿದೆ? ಅಲೆಮಾರಿ, ಅರೆ ಅಲೆಮಾರಿ ಜನಾಂಗಕ್ಕೆ ನಿರ್ದಿಷ್ಟವಾದ ರೀತಿಯಲ್ಲಿ ನಿಮ್ಮಿಂದ ಯಾವುದೇ ತರಹದ ಪ್ರಪೋಸಲ್ ಕೇಂದ್ರ ಸರ್ಕಾರಕ್ಕೆ ಹೋಗಿಲ್ಲ. ಬಹುಶಃ ಅದು ಹೋಗಿದ್ದರೆ, ಈ ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಬಹುದಾಗಿತ್ತು. ಅವರಿಗೆ ಮೂಲಭೂತವಾಗಿ ಕೊರತೆ ಇರುವುದು ಏನೆಂದರೆ ಅವರು ನೂರಕ್ಕೆ ನೂರು ಗುಡಿಸಲಿನಲ್ಲಿ ವಾಸ ಮಾಡುವವರು. ನಿಮಗೆ ಗೊತ್ತಿರಬಹುದು. ಇವತ್ತು ಏನಾದರೂ ಗುಡಿಸಲು ರಹಿತ ಯೋಜನೆ ಎಂದು ಬಂದಿದ್ದರೆ, ನಿಮ್ಮ ಸರ್ಕಾರದ ಕಲ್ಪನೆಗೆ ಬಂದಿದ್ದರೆ, ಇದು ಕೇವಲ ಗೊಲ್ಲರಹಟ್ಟಿಗಳನ್ನು ನೋಡುವುದರ ಮುಖೇನ ಎನ್ನುವುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಅದರ ಜೊತೆಗೆ, ಅವರು ಹುಟ್ಟಿನಿಂದ ಸಾಯುವವರೆಗೂ ಕೂಡ ಅವರದೇ ಅದ ಸಂಪ್ರದಾಯ ಹೊಂದಿದ್ದಾರೆ. ಅವರು ಯಾರ ಜೊತೆಯೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಅಮಾನವೀಯ ಎಂದು ಹೇಳುತ್ತೇವೋ ನನಗೆ ಗೊತ್ತಿಲ್ಲ. ನಿಮ್ಮ ಕಡೆ ಸೋಲಿಗರು ಇದ್ದಾರೆ. ಸೋಲಿಗರಿಗಿಂತ ಕಡೆಯಾಗಿ ಜೀವನ ಮಾಡುವವರು ಅವರು. ಒಬ್ಬ ಹೆಣ್ಣು ಮಗಳು pregnant ಆದ ಸಂದರ್ಭದಲ್ಲಿ ಡೆಲಿವರಿಗೆ 15 ದಿವಸಗಳಿದ್ದರೆ ಅವಳನ್ನು ಕರೆದುಕೊಂಡು ಹೋಗಿ ಕಾಡಿನಲ್ಲಿ ಬಿಡುತ್ತಾರೆ ಅಥವಾ ಹೊಲದಲ್ಲೆಲ್ಲೋ ಬಿಡುತ್ತಾರೆ. ಅಲ್ಲಿ ಹಾವುಗಳು ಓಡಾಡುತ್ತಿರುತ್ತವೆ, ಬೆಳಕು ಇರುವುದಿಲ್ಲ. ಆಕೆಗೆ ತನ್ನಷ್ಟಕ್ಕೆ ತಾನೇ ಡೆಲಿವರಿಯಾಗಬೇಕು. ಆಕೆಯ ಹತ್ತಿರ ಮೂರು ತಿಂಗಳವರೆಗೆ ಯಾರೂ ಹೋಗುವುದಿಲ್ಲ. ಈ ಸಂಪ್ರದಾಯ ಇವತ್ತೂ ಕೂಡ ಆ ಜನಾಂಗದಲ್ಲಿದೆ. ಇಂಥ ಜನಾಂಗದ ಬಗ್ಗೆ ಇವತ್ತಲ್ಲ 300 ವರ್ಷಗಳಿಂದ ಸಂಶೋಧನೆ ಮಾಡಿರುವವರು ಇದ್ದು, ಸಾಕಷ್ಟು ವರದಿಗಳಿವೆ. ಎಲ್ಲಾ ರೀತಿಯ ವರದಿಗಳಿವೆ. ಕಾಡುಗೊಲ್ಲರ ಪರಿಸ್ಥಿತಿ ಏನೆಂದು ಅಧ್ಯಯನ ಮಾಡಿರುವ ವರದಿ ಸಹ ಇದೆ. ಇಷ್ಟಾಗಿಯೂ ಕೂಡ ಬಹುಶಃ ಹಾವನೂರು ವರದಿಯ ನಂತರ, ರಾಜ್ಯ ಸರ್ಕಾರದವರನ್ನು ಅವರನ್ನು Group-4ಕ್ಕೆ ಸೇರಿಸಿರುವುದರಿಂದ ಅವರಿಗೆ ಯಾವುದೇ ರೀತಿಯ ಸವಲತ್ತು ಸಿಗುತ್ತಿಲ್ಲ. ಅವರು ವಿದ್ಯಾವಂತರಾಗುವುದಕ್ಕೂ ಅವಕಾಶವಿಲ್ಲ. ವಿದ್ಯಾವಂತರಾದರೂ ಕೂಡ ಅವರಿಗೆ ಸವಲತ್ತು ಸಿಗದಿರುವ

ಪರಿಸ್ಥಿತಿ ಇದೆ. ನಾನು ಮುಖ್ಯವಾಗಿ ನಿಮ್ಮ ಗಮನಕ್ಕೆ ತರುವುದೇನೆಂದರೆ, ಅಲೆಮಾರಿ, ಅರೆ ಅಲೆಮಾರಿ tribal character ಇರುವವರು ಇದನ್ನು ಮಾಡಬೇಕಾದಾಗ ಮೊದಲು ನೀವು SC/ST Commissionಗೆ ಅಧಿಕಾರ ಕೊಡಿ. ನಿಮಗೆ ಏಕೆ ಇದು ಹೊಳೆಯಲಿಲ್ಲವೆಂದು ನನಗೆ ಅರ್ಥವಾಗಲಿಲ್ಲ. ಸದನದಲ್ಲಿ ಕಾನೂನು ಸಚಿವರಿದ್ದಾರೆ. ಸರ್ವೋಚ್ಚ ನ್ಯಾಯಾಲಯ ಕೊಟ್ಟ ತೀರ್ಪಿನ ಆಧಾರದ ಮೇಲೆ ನೀವು ಇದನ್ನು ಮಾಡುವುದಕ್ಕಾಗುವುದಿಲ್ಲ. ಅದನ್ನು ಮಾಡಲು ಮೊದಲು amendment ತಂದು ಅವರಿಗೆ ಅಧಿಕಾರವನ್ನು ಕೊಡಿ. ಕುಲಶಾಸ್ತ್ರ ಅಧ್ಯಯನ ವರದಿ ಇನ್ನು 6 ತಿಂಗಳಲ್ಲಿ ಬಂದಾಗ Commission ಶಿಫಾರಸ್ಸು ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ನಾವು ಖಂಡಿತವಾಗಿ ಶಿಫಾರಸ್ಸು ಮಾಡುತ್ತೇವೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ. ಅಲೆಮಾರಿ, ಅರೆ ಅಲೆಮಾರಿ ಜನಾಂಗಕ್ಕೆ ಸಂಬಂಧಿಸಿದ proposals Government of India ಮುಂದೆ ಹೋಗಿ ಅದಕ್ಕೆ ಹೆಚ್ಚು ಹಣ ತಂದು ಇವರಿಗೆ ವಾಸ್ತವ ಇರುವ ಪರಿಸ್ಥಿತಿಯನ್ನು ಅರ್ಥ ಮಾಡಿಸಿ ಈ ಸಮಸ್ಯೆಯನ್ನು ಬಗೆಹರಿಸುವ ಕೆಲಸವನ್ನು ಮಾಡಬೇಕು. ಇದರಲಿ ಕೇವಲ ಕಾಡುಗೊಲ್ಲರು ಮಾತ್ರವಲ್ಲ ದೊಂಬಿದಾಸರು ಬರುತ್ತಾರೆ, ಬೇರೆ ಬೇರೆ ಜನಾಂಗದವರೂ ಬರುತ್ತಾರೆ. ಅವರೆಲ್ಲರಿಗೂ ಕೂಡ ಸಹಾಯ ಮಾಡುವುದಕ್ಕೆ ಸಾಧ್ಯತೆ ಇದೆ. Tribal character ಇರತಕ್ಕಂಥವರಿಗೆ separate ಆದ ಮೀಸಲಾತಿ ತರುವ ವ್ಯವಸ್ಥೆಯನ್ನು ನೀವು ಮಾಡಬೇಕು ಎನ್ನುವ ಒತ್ತಾಯವನ್ನು ಮಾಡುತ್ತೇನೆ. ಮಂತ್ರಿಯವರಿಂದ ನೇರವಾಗಿ ಸ್ಪಷ್ಟವಾದ ಉತ್ತರವನ್ನು ನಾನು ಬಯಸುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ: ಕರ್ನಾಟಕದಲ್ಲಿ ಅಲೆಮಾರಿ, ಅರೆ ಅಲೆಮಾರಿ ಜನಾಂಗದವರ ಸುಮಾರು 73 ಉಪ ಜಾತಿಗಳಿವೆ. ಅವರ ಜನ ಸಂಖ್ಯೆ 5-8 ಲಕ್ಷ ಇದೆ. ಅವರು ಒಟ್ಟಾಗಿ ಒಂದೇ ಕಡೆ ವಾಸ ಮಾಡುವುದಿಲ್ಲ. ಇದನ್ನು ಗಮನಿಸಿದ್ದೇವೆ. ಆದರೆ Central Governmentನಲ್ಲಿ nomadic tribes ಎಂದು notification ಆಗಿದೆ. ಆದರೆ, ಕರ್ನಾಟಕದಲ್ಲಿ ಇವರನ್ನು ಹಿಂದುಳಿದ ವರ್ಗಕ್ಕೆ ಸೇರಿಸಿದ್ದಾರೆ. ಇದನ್ನು ಗಮನಿಸಿದ್ದೇವೆ. ಆದ್ದರಿಂದಲೇ ಸ್ಪಷ್ಟವಾದ ವರದಿಯನ್ನು study report ತೆಗೆದುಕೊಳ್ಳಬೇಕೆನ್ನುವ ಯೋಚನೆಯನ್ನು ಮಾಡಿದ್ದೇವೆ. ಕುಲಶಾಸ್ತ್ರದ ಪ್ರಕಾರ report ಬಂದ ನಂತರ ಹಿಂದುಳಿದ ವರ್ಗಗಳ ಆಯೋಗದ ವರದಿ ಬಂದ ನಂತರ ಅಥವಾ ತದನಂತರ ಕೇಂದ್ರ ಸರ್ಕಾರಕ್ಕೆ ಇವರನ್ನು STಗೆ ಸೇರಿಸಬಹುದೆ ಅಥವಾ ಹಿಂದುಳಿದ ವರ್ಗಗಳಲ್ಲಿಯೇ ಇಟ್ಟುಕೊಳ್ಳಬೇಕೆನ್ನುವ

ವರದಿಯಾಧಾರದ ಮೇಲೆ Cabinet ಮುಂದೆ ಈ ವಿಷಯ ಬಂದಾಗ ಚರ್ಚೆಯನ್ನು ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ: ಇಲ್ಲ, ತಾವು ತಪ್ಪು ಹೇಳುತ್ತಿದ್ದೀರಿ.

ಅಧ್ಯಕ್ಷರು: ಇದು clarification. ನೀವು ಗಮನ ಸೆಳೆಯುವುದಕ್ಕೆ ಕೇಳಿ ಈ ತರಹ ಚರ್ಚೆ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: No No. ಕಾನೂನು ಸಚಿವರು ಸದನದಲ್ಲಿ ಇದ್ದಾರೆ. ಕುಲಶಾಸ್ತ್ರದ ಅಧ್ಯಯನದ ವರದಿ ಬಂದ ಮೇಲೆ SC/ST Commission ಇದೆಯಲ್ಲ ಅವರ ಶಿಫಾರಸ್ಸು ಇದ್ದರೆ ಮಾತ್ರ ಆಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ಎ. ನಾರಾಯಣ ಸ್ವಾಮಿ: ನಾನು ಅದನ್ನೇ ಹೇಳಿದ್ದೇನೆ. ವರದಿ ಬಂದ ನಂತರ…..

ಶ್ರೀ ಟಿ.ಬಿ. ಜಯಚಂದ್ರ: ನೀವು Backward Classes ಎಂದು ಹೇಳಿದಿರಿ, ಇದು Backward Classesಗೆ ಬರುವುದಿಲ್ಲ. SC/ST Commissionಗೆ ಇದು ಬರುತ್ತದೆ. ನೀವು ಮೊದಲು SC/ST Commissionಗೆ ಅಧಿಕಾರ ಕೊಡಿ.

ಶ್ರೀ ಎ. ನಾರಾಯಣಸ್ವಾಮಿ: ಅವರು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದ್ದಾರೆ. ಆ ಪಟ್ಟಿಯಲ್ಲಿರುವ ಜನಾಂಗವನ್ನು ನೇರವಾಗಿ withdraw ಮಾಡಿ SC/STಗೆ ಸೇರಿಸುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗಿ ಬರುತ್ತದೆ. ಆದ್ದರಿಂದ ವರದಿಯಾಧಾರದ ಮೇಲೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಇವರನ್ನು STಗೆ ಸೇರಿಸಬೇಕೆ ಅಥವಾ Backward Classesಗೆ ಸೇರಿಸಬೇಕೆನ್ನುವ ಬಗ್ಗೆ ತೀರ್ಮಾನ ಮಾಡುತ್ತೇನೆಂದು ಹೇಳಿದ್ದೇನೆ. ಅದನ್ನು ನೇರವಾಗಿ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಆ ಕಾನೂನನ್ನು ತಾವು ಅರಿತುಕೊಳ್ಳಬೇಕು. ಇದಾದ ನಂತರರ, ಅದಕ್ಕೆ ವಿಶೇಷವಾಗಿ ಹಿಂದಿನ ಬಜೆಟ್‌ನಲ್ಲಿ ಗೊಲ್ಲರಹಟ್ಟಿಗಳ ಅಭಿವೃದ್ಧಿಗೆ 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೆವು. ಈ ಸಲ 5 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ತಮ್ಮ ಜಿಲ್ಲೆಯಲ್ಲಿ ಗೊಲ್ಲರಹಟ್ಟಿಗಳನ್ನು, ಬೇಚರಕ್ ವಿಲೇಜ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡಲಿಕ್ಕಾಗಲಿಲ್ಲವೆಂದು ಹೇಳಿದಿರಿ. ಕಂದಾಯ ಇಲಾಖಾಧಿಕಾರಿಗಳು ಅದನ್ನು review ಮಾಡುವಾಗ ಅವರನ್ನು regularize ಮಾಡುವುದಕ್ಕೆ ಅವರಿಗೆ ಅಧಿಕಾರವಿತ್ತು. ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ

ಮಾಡುವುದಕ್ಕೆ ಅಧಿಕಾರವಿತ್ತು. ಸಮಾಜ ಕಲ್ಯಾಣ ಇಲಾಖೆ ತೀರ್ಮಾನ ಮಾಡಿದೆ. ನಾವೇ Nodal Agency ಆಗಿ ಪ್ರತಿ ವರ್ಷ ಜಿಲ್ಲೆಯಲ್ಲಿ review ಮಾಡಿ ಯಾವ ಯಾವುದು ಗೊಲ್ಲರಹಟ್ಟಿಗಳಿವೆ ಅಥವಾ ಬೇಚರಕ್ ವಿಲೇಜ್‌ಗಳಿವೆ ಅವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ನಾವೇ ಕಂದಾಯ ಇಲಾಖೆಯಿಂದ ಶಿಫಾರಸು ಮಾಡಿ ಅದನ್ನು regularize ಮಾಡಿಸುತ್ತೇವೆ. ಉಳಿದಂತೆ ವಿಶೇಷವಾಗಿ ಅವರಿಗೆ ಸವಲತ್ತನ್ನು ಕೊಡಬೇಕೆನ್ನುವ ಅಪೇಕ್ಷ ಇದೆ. ಅವರಿಗೇನು benefit ಕಡಿಮೆ ಇದೆ ಅದನ್ನು ಹೆಚ್ಚು ಮಾಡಿ, ಅವರ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಯೋಜನೆ ಕೊಡುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: 2 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಈಗಾಗಲೇ ಹೇಳಿದ್ದೀರಿ.

ಅಧ್ಯಕ್ಷರು: ತಾವು ಗಮನ ಸೆಳೆಯಬೇಕು.

ಶ್ರೀ ಎ. ನಾರಾಯಣಸ್ವಾಮಿ: ಈ ಸಾರಿ ಬಜೆಟ್‌ನಲ್ಲಿ 5 ಕೋಟಿ ರೂಪಾಯಿ ಇಟ್ಟಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ: ಸಾವಿರಾರು ಗೊಲ್ಲರಹಟ್ಟಿಗಳಿವೆ. ಅದರ ಜೊತೆಗೆ 73 ಉಪ ಜಾತಿಗಳಿವೆ ಎಂದು ಹೇಳಿದಿರಿ. ಅವರಿಗೆ 5 ಕೋಟಿ ರೂಪಾಯಿಗಳನ್ನು ಇಟ್ಟರೆ ಆಗುವುದಿಲ್ಲ. ಪೂರ್ಣ ಬಜೆಟ್ ಮಂಡಿಸುವಾಗ ನೂರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ.

ಶ್ರೀ ಎ. ನಾರಾಯಣಸ್ವಾಮಿ: ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡುತ್ತೇನೆ. ಅವರು ಇರುವುದೇ 5-8 ಲಕ್ಷ. ಬಜೆಟ್‌ನಲ್ಲಿ ಚರ್ಚೆ ಮಾಡಿ ಮುಖ್ಯಮಂತ್ರಿಯವರ ಮನವೊಲಿಸಿ ಕೊಡೋಣ.

ಆ) ವಿಷಯ: ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಂಟ್ವಾಳ ತಾಲ್ಲೂಕಿನ ಸಜಪನಾಡು ಗ್ರಾಮದ ಕಂಚಿನಡ್ಕಪದಲ್ಲಿ ಸುವ್ಯವಸ್ಥಿತವಾದ ಸರ್ಕಾರಿ ಶಾಲೆಗಳು, ಸಾರ್ವಜನಿಕ ಸೌಲಭ್ಯಗಳು, ವಿವಿಧ ಮತಗಳ ಧಾರ್ಮಿಕ ಕೇಂದ್ರಗಳು ಇದ್ದು, ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯ ಕಾಲೋನಿ ಹಾಗೂ ಜನ ವಸತಿ ಪ್ರದೇಶದಲ್ಲಿ ಘನ ತ್ಯಾಜ್ಯ ವಿತರಣಾ ಘಟಕವನ್ನು ಸ್ಥಾಪಿಸುವುದರಿಂದ ಪರಿಸರ ಮಾಲಿನ್ಯ ಹೆಚ್ಚಾಗುವ ಬಗ್ಗೆ.

\- - -

ಶ್ರೀ ಯು.ಟಿ. ಖಾದರ್ (ಉಳ್ಳಾಲ): ಮಾನ್ಯ ಅಧ್ಯಕ್ಷರೆ, ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಂಟ್ವಾಳ ತಾಲ್ಲೂಕಿನ ಸಜಪನಾಡು ಗ್ರಾಮದ ಕಂಚಿನಡ್ಕಪದಲ್ಲಿ ಸುವ್ಯವಸ್ಥಿತವಾದ ಸರ್ಕಾರಿ ಶಾಲೆಗಳು, ಸಾರ್ವಜನಿಕ ಸೌಲಭ್ಯಗಳು, ವಿವಿಧ ಮತಗಳ ಧಾರ್ಮಿಕ ಕೇಂದ್ರಗಳು ಇದ್ದು, ಪರಿಶಿಷ್ಟ ವರ್ಗ